ಮಲ್ಲಿಕಾಳ ಕನಸು ನಿಮ್ಮ ಆತ್ಮಚರಿತ್ರೆ ತರಬೇಕೆನ್ನುವುದು. ಅದಕ್ಕೆ ನೀವು ಒಪ್ಪಿಗೆ ಕೊಟ್ಟರೆ. ನಿಮಗೆ ಡಿಪ್ರೆಶನ್ ಕಡಿಮೆ ಆದನಂತರ ಆರಂಭ ಮಾಡಬಹುದು ಎಂದು ನಿನ್ನೆ ಕಾರ್ಯಕಾರಿಣಿ ಸಭೆಯಲ್ಲಿ ತೀರ್ಮಾನವಾಗಿದೆ'.

ಏನು ಹೇಳಬೇಕು? ಇವರು ಒಂದು ತಮ್ಮ ತೀರ್ಮಾನದ ಅಭಿಪ್ರಾಯ ನನ್ನ ಮೇಲೆ ಹೇರುತ್ತಾರೆ. ಮತ್ತೊಂದು ನನ್ನ ಏಕಾಂತಕ್ಕೆ ಭಂಗ ತರುತ್ತಾರೆ ಎಂದುಕೊಂಡಳು.

'ಅದಕ್ಕೆ, ದಿಗ್ವಿಜಯ ಅನ್ನುವದೇ ಸೂಕ್ತ ಹೆಸರು' ಎಂದರು ಮಲ್ಲಿಕಾ. 'ಅಪರಾಧ, ಮೋಸ, ವಂಚನೆ, ಆತ್ಮವಂಚನೆಗಳೆಂಬ ಇನ್ನೂ ಸಾಕಷ್ಟು ಹೆಸರುಗಳಿವೆ ಪರಿಶೀಲಿಸಬಹುದು' ಎಂದಳು.

ಅವರಿಗೆ ಅಘಾತವಾಯಿತು.

'ಅದು ನಿಮಗೆ ಸೂಕ್ತವಾಗಿ ಹೊಂದಿಕೆಯಾಗದ ಹೆಸರು. ದಿಗ್ವಿಜಯವೇ ಸರಿಯಾದ ಹೆಸರು' ಎಂದು ಮಲ್ಲಿಕಾ ಹೇಳಿದಳು. ಇವಳಿಗೆ ಮಲ್ಲಿಕಾಳ ಮೇಲೆ ಬಹುವಾಗಿ ಸಿಟ್ಟು ಬಂತು.

ನನ್ನ ಬಗ್ಗೆ ಪುಸ್ತಕ ಬರೆಯಿಸಿ, ನನ್ನನ್ನು ಇತಿಹಾಸದಲ್ಲಿ ಸೇರಿಸುವ ಹುನ್ನಾರ ಈ ಮಲ್ಲಿಕಾಳಲ್ಲಿ ಇರಬಹುದು. ಇವಳ ತಿರಸ್ಕೃತ ಮುಖದ ಅಭಿವ್ಯಕ್ತಿಗೆ ಅವರು ಇಬ್ಬರೂ ಎದ್ದು ನಿಂತರು. ಬರುತ್ತೇನೆ ಎಂದು ಹೊರಹೋದರು.

ಗವಾಕ್ಷಿಯಲ್ಲಿ ಬಂದಂತೆ ಮತ್ತೆ ಬಂದರು.

'ಮೇಡಂ ನಿಮ್ಮ ಕನ್ನಡ ಅಷ್ಟು ಸರಿಯಾಗಿಲ್ಲ, ಇಂಗ್ಲೀಷ್ ಆದರೆ ನಿಮ್ಮನ್ನು ಮೀರಿಸುವವರಿಲ್ಲ. ಅದಕ್ಕೆ ನಿಮ್ಮ ಆತ್ಮಚರಿತ್ರೆ ಬರೆಯಲು ಒಬ್ಬನನ್ನು ನಿಯಮಿಸಿದ್ದೇನೆ' ಎಂದಳು ಮಲ್ಲಿಕಾ.

ಇವಳು ಆಯ್ತು ಎನ್ನುವುದು ಬಿಟ್ಟು ಏನು ಹೇಳಲಿಲ್ಲ.

ಡಿಪ್ರೆಶನ್ ಇನ್ನೂ ಜೋರಾಗಿ ನುಗ್ಗುತ್ತಿತ್ತು.

'ಆತ ಕನ್ನಡದ ಖ್ಯಾತ ಉದಯೋನ್ಮುಖ ಕಥೆಗಾರ, ಪಾಪ ಕೆಲಸವಿಲ್ಲ, ಹತ್ತು ಸಾವಿರಕೊಡುತ್ತೇವೆ ಎಂದು ಹೇಳಿದ್ದೇವೆ. ನಾಳೆಯೇ ಬರುತ್ತಾನೆ. ಆತನಿಗೆ ಸಹಕರಿಸಿ'. ಎಂದು ಹೇಳಿ ಬೇಗನೆ ಗೇಟುದಾಟಿ ಹೋದರು.

ಇವರಿಗೂ ನನ್ನ ಪುಸ್ತಕದ ಮುಖಾಂತರ ನನ್ನ ಇತಿಹಾಸ ತಿಳಿದುಕೊಳ್ಳುವ ಕುತೂಹಲ ಇರಬಹುದು. ನನ್ನ ನಂತರದ ಎರಡನೇ ಸ್ಥಾನದಲ್ಲಿರುವ ಮಲ್ಲಿಕಾಳಿಗೆ ಏನೇನು ಆಸೆ ಇದೆಯೋ ದೇವರೇ ಬಲ್ಲ ಎಂದು ಯೋಚಿಸಿ, ಮಲಗುವ ಕೋಣೆಗೆ ಹೋಗಿ ಮಲಗಲು, ಸಜ್ಜಾದಳು. ನಿನ್ನೆ ನಡೆದ ಘಟನೆಗಳು ಇಂದು ಆಗುತ್ತಿವೆಯೇ ಎಂದು ಯೋಚಿಸಿದಳು.

ರಾತ್ರಿ ಆದರೂ ನಿದ್ರೆ ಮತ್ತೆ ಬಾಷ್ಪೀಕರಣಗೊಂಡಿತ್ತು. ಆ ಶಬ್ದಗಳಿಗಾಗಿ ಆಲಿಸಿದಳು. ಬೆಳಕು ನೆರಳಿನಾಟಕ್ಕಾಗಿ ನಿರೀಕ್ಷಿಸಿದಳು. ಗೂಬೆಯ ಶಬ್ದಕ್ಕಾಗಿ ಕಿವಿಗೊಟ್ಟು ಆಲಿಸಿದಳು. ಒದೆಯುವ ಕಾಲುಗಳಿಗಾಗಿ ಕಾಯುತ್ತ ಕುಳಿತಳು.

ಏನೇನೂ ಇಲ್ಲ.

ನಿನ್ನೆ ನಡೆದಿದ್ದು ಇಂದು ಇಲ್ಲ.

ಇಂದು ನಡೆಯುವುದು ನಾಳೆಯೂ ಇರಲಿಕ್ಕಿಲ್ಲ.

ನಾಳೆ ನಡೆಯುವುದು ನೋಡಿದವರು ಯಾರು?

ಅಂದು ರಾತ್ರಿ ಎಂಬುದು ಹಾಗೆಯೇ ಅನೇಕ ವಿಚಾರಗಳಲ್ಲಿ ಕಳೆದುಹೋಗಿತ್ತು. ಬೆಳಗು ಇಂದು ಯಾಕೋ ಬಹುದೂರದಲ್ಲಿದೆ ಎನ್ನಿಸಿತು.

ತಾನು ಸಮಾಜ ಸೇವೆ ಮಾಡುತ್ತಿರುವುದು ಯಾಕೆ.

ತನ್ನ ಪಾಪಗಳಿಗೆ ಪರ್ಯಾಯ ಪ್ರಾಯಶ್ಚಿತ್ತ ಮಾರ್ಗಕ್ಕಾಗಿಯೇ? ತನ್ನ ನಂಬಿಕೆಗಳನ್ನು ಗಟ್ಟಿಗೊಳಿಸಲಿಕ್ಕಾಗಿಯೇ... ಮುಂಜಾನೆ ಬಾಗಿಲು ತೆಗೆದುಕೊಂಡು ಬಂದಿತು... ಕಾಫಿಗೆ ನೀರು ಇಡಬೇಕಾದ ಸಮಯ. ಬಗಲಲ್ಲಿ ಖಾದಿಯ ಚೀಲ ಸಿಕ್ಕಿಸಿಕೊಂಡ ಗಡ್ಡದಾರಿ ವ್ಯಕ್ತಿಯೊಬ್ಬ ಮನೆಯ ಒಳಗೆ ಬಂದು, 'ಮ್ಯಾಡೆಮ್ ಬರಬಹುದಾ' ಅಂದ.

ಮನೆಯ ಒಳಗಡೆ ಬಂದಿದ್ದಾನೆ ಮತ್ತೆನು ಕೇಳುತ್ತಿದ್ದಾನೆ? 'ಬನ್ನಿ' ಎಂದಳು. ಒಳ ಬಂದವನೆ ಸೋಫಾದ ಮೇಲೆ ಕುಳಿತುಕೊಂಡ.

'ಮೇಡಮ್ ಇಲ್ಲಿ ಕೂಡ್ರಬಹುದಲ್ಲ' ಅಂದ. ಕೂತ ಮೇಲೆ ಏನು ಹೇಳುವುದು 'ಕೂಡ್ರಬಹುದು' ಅಂದಳು.

ಇವನು ತನ್ನ ಜೀವನ ಚರಿತ್ರೆ ಬರೆಯಲು ಬಂದಿರುವ ಕವಿಚಕ್ರವರ್ತಿಯೇ ಇರಬೇಕು. ಯಾಕೆಂದರೆ ಆಕ್ರಮಣಶೀಲತೆ, ಎಲ್ಲವೂ ತನ್ನದಾಗಿಸಿಕೊಳ್ಳುವ ಹಂಬಲ, ಭ್ರಮೆಗಳೆಂಬ ಸಿಂಪ್ಟಮ್‌ನಿಂದಲೇ ಕಂಡು ಹಿಡಿದಳು.

ತಾವು ಯಾರು ? ಎಂದಾಗ ಆತ ಎಲ್ಲಾ ಹೇಳಿದ.

'ನಾನು ತಮ್ಮ ಪವಿತ್ರವಾದ ಜೀವನ ಚರಿತ್ರೆ ಬರೆಯಲು ಬಂದ ಪಾಮರ' ಅಂದ. ಆತನನ್ನು ಪ್ರಾಥಮಿಕ ಪರೀಕ್ಷೆಗೆ ಒಳಪಡಿಸಿ ಆತನಿಗೆ ಈ